ಕ್ರಿಮಿನಲ್ ಮಿಸ್ ನಂ.**442/2023**

ಪಿ ಡಬ್ಲ್ಯೂ **-2**

ದಿನಾಂಕಃ **14-11-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ ಆರ್ ಕೆ ವಕೀಲರಿಂದ

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಬಿಎನ್ ಕೆ ವಕೀಲರಿಂದ

ಸದರಿ ಅರ್ಜಿಯನ್ನು ನಮ್ಮ ಊರಿನ ಲಕ್ಷ್ಮೀಬಾಯಿ ಹೂಡಿರುತ್ತಾರೆ. ಲಕ್ಷ್ಮೀಬಾಯಿರವರ ಮಗಳು ಜೀವನಾಂಶಕ್ಕಾಗಿ ಅವರ ಗಂಡನ ಮೇಲೆ ಸದರಿ ಅರ್ಜಿಯನ್ನು ಹೂಡಿರುತ್ತಾರೆ. ಲಕ್ಷ್ಮೀಬಾಯಿಯವರ ಮಗಳ ಹೆಸರು ನನಗೆ ಗೊತ್ತಿರುವುದಿಲ್ಲ. ಅರ್ಜಿದಾರರು ಮತ್ತು ಎದುರುದಾರರ ಮದುವೆ 2013 ನೇ ಇಸವಿಯಲ್ಲಿ ನೆರವೇರಿರುತ್ತದೆ. ಮದುವೆಗೆ ಅರ್ಜಿದಾರರು ಮತ್ತು ಎದುರುದಾರರು ಇಬ್ಬರು ಸೇರಿ ಖರ್ಚು ಮಾಡಿ ಮದುವೆ ಮಾಡಿಕೊಂಡಿರುತ್ತಾರೆ, ಎಷ್ಟು ಖರ್ಚು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಮದುವೆ ಸಮಯದಲ್ಲಿ ಹೆಣ್ಣಿನ ಮನೆಯವರು ಬೀರು, ಬಟ್ಟೆ, ಬಗಳದ ಸಾಮಾನುಗಳನ್ನು ಗಂಡಿನ ಕಡೆಯವರಿಗೆ ನೀಡಿರುತ್ತಾರೆ. ಮೇಲೆ ತಿಳಿಸಿದ ವಸ್ತುಗಳನ್ನು ನಿಮ್ಮ ಎದುರುಗಡೆ ನೀಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

ಎದುರುದಾರರು ಅರ್ಜಿದಾರರಿಗೆ ಹಿಂಸೆ ಕೊಡುವುದನ್ನು ನೀವು ನೋಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದು, ಅರ್ಜಿದಾರರು ಆಸ್ಪತ್ರೆಗೆ ಹೋಗುವಾಗ ವಿಚಾರವನ್ನು ಕೇಳಿ ತಿಳಿದುಕೊಂಡಿರುತ್ತೇನೆಂದು ನುಡಿದಿರುತ್ತಾರೆ. ನಮ್ಮ ಊರಿನ

ಹಿರಿಯರು ಅರ್ಜಿದಾರರು ಮತ್ತು ಎದುರುದಾರರನ್ನು ಕೂಡಿಸಿ ನಮ್ಮ ಊರಿನಲ್ಲಿ ಪಂಚಾಯಿತಿ ಮಾಡಿರುತ್ತಾರೆ. ಅರ್ಜಿದಾರರ ತಂದೆ ತೀರಿ ಹೋಗಿ ಬಹಳ ವರ್ಷವಾಗಿದ್ದು, ಅವರ ತಾಯಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಅರ್ಜಿದಾರರ ಅಕ್ಕ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆಂದು ನುಡಿದಿರುತ್ತಾರೆ. ಅರ್ಜಿದಾರರ ಅಕ್ಕ ಅರ್ಜಿದಾರರ ತಾಯಿಯನ್ನು ನೋಡಿಕೊಳ್ಳಬೇಕಾಗಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನೀವು ನಿಮ್ಮ ಪ್ರಮಾಣ ಪತ್ರದಲ್ಲಿ ಸುಳ್ಳು ಮಾಹಿತಿಯನ್ನು ನೀಡಿರುತ್ತೀರಾ, ಅರ್ಜಿದಾರರ ಕುಟುಂಬದವರಿಗೆ ಮದುವೆ ಮಾಡುವ ಸಾಮರ್ಥ್ಯ ಇಲ್ಲದ ಕಾರಣ ಎದುರುದಾರರು ಅವರೇ ಖರ್ಚು ಮಾಡಿ ಮದುವೆ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಅರ್ಜಿದಾರರು ಎದುರುದಾರರ ಜೊತೆ ಮೂರು ತಿಂಗಳು ಸಹ ಜೀವನ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಎರಡು ತಿಂಗಳು ಒಟ್ಟಿಗೆ ಇದ್ದು, ನಂತರ ಜಗಳ ಮಾಡಿಕೊಂಡು ಬಂದಿದ್ದು, ಪಂಚಾಯಿತಿಯವರು ಮತ್ತೆ ಒಟ್ಟಾಗಿ ಜೀವನ ಮಾಡಿ ಎಂದು ತಿಳಿಸಿರುತ್ತಾರೆಂದು ನುಡಿದಿರುತ್ತಾರೆ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**